Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 174] ಮಂಗಳವಾರ 3—4—45 [3 ಪೈ

ಸಂಸ್ಥಾನದ ಸುದ್ದಿಗಳು

ಭಿಕ್ಷುಗಾರರ ಮಸೂದೆಯಲ್ಲಿ ಸೆಂಟ್ರಲ್ ಕಮಿಟಿಗೆ 12 ಕ್ಕಿಂತ ಕಮ್ಮಿ ಸದಸ್ಯರಿರಬಾರದೆಂಬ ತಿದ್ದುಪಡಿಯನ್ನು ಸರಕಾರದವರು ಮಾಡಿರುವರು.

ಬೆಂಗಳೂರಿನಲ್ಲಿ ಸಧ್ಯಕ್ಕೆ 50 ಹಸು 50 ಎಮ್ಮೆ ಕೊಂಡು ಮಾದರಿ ಡೈರಿ ಫಾರಂ 3 ಲಕ್ಷ ರೂ. ಬಂಡವಾಳದಲ್ಲಿ ಸ್ಥಾಪಿಸಲ್ಪಡುವುದು.

ನ್ಯಾಯಪಿಠಾಯಕ ಮತ್ತು ಪ್ರ. ಪ್ರ. ಸಭೆಗಳ ಉಪಚುನಾವಣೆಗಳು 6—5—45 ರಲ್ಲಿ ನಡೆಯಬೇಕೆಂದು ಸರ್ಕಾರಿ ಅಜ್ಞೆಯಾಗಿದೆ.

ಕೋಲಾರದ ಚಿನ್ನದ ಗಣಿಯವರು ಮೈಸೂರು ಸರಕಾರದವರು 40 ಲಕ್ಷ ರೂ. ಧನ ಸಹಾಯಮಾಡದಿದ್ದರೆ ತಾವು ಕೆಲಸ ನಿಲ್ಲಿಸುವುದಾಗಿ ಬೆದರಿಸಿರುತ್ತಾರೆ.

ರಾಜಧಾನಿಯಲ್ಲೂ ಕೊರ್ಪ ವೇಲೆ ಪಂಚೆಗಳನ್ನು ಕೊಡುವ ಏರ್ಪಾಡಾಗಿದೆ.

ಆಕಾಶವಾಣಿ 4—4—45

ವೃತ್ತಾಂತ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6.30, 7.50, ರಾತ್ರಿ 10. ಬಿ. 8 ಹಾಡುಗಾರಿಕೆ. ಮ. 2 ಶ್ರೀಮತಿ ಲಲಿತರವರ ವೀಣೆ. 2-15 ಶ್ರೀ ಸರಸ್ವತಮ್ಮನವರ 'ಪ್ರಪಂಚದ ತರ್ಜನ ಮುಖಿಲ್ಲೆ' ಎಂಬ ಭಾಷಣ. ಸಾ, 6 ವೇಣುವಾದನ 7-50 ಭಾರತೇಶ ವೈಭವ, ರಾ. 8—15 ವೇಣುವಾದನ. 9—15 ವಿ || ನಾರಣಪ್ಪನವರ ಹಾಡುಗಾರಿಕೆ.



ಐ.ಜೆ. ಹಾಲ್, ಸರಾಫ್ ಅಂಗಡಿ
ರಸ್ತೆ ಬೀದಿ, ಮೈಸೂರು.

ತ್ರಿಮೂರ್ತಿಗಳಲ್ಲಿ ತಿಕ್ಕಾಟವೇ

ತ್ರಿಮೂರ್ತಿಗಳಲ್ಲಿ ಪೋಲೆಂಡ ವಿಷಯದಲ್ಲಿ ತಕ್ಕಮಟ್ಟಿಗೆ ಅಪಾಯಕರವಾದ ತಿಕ್ಕಾಟ ಪ್ರಾರಂಭವಾಗಿದೆ. ಸ್ಯಾನ್‌ಫ್ರಾನ್ಸಿಸ್ಕೋ ಪ್ರಪಂಚ ಶಾಂತಿ ರಕ್ಷಣಾ ಸಮ್ಮೇಳನಕ್ಕೆ ಧಕ್ಕೆ ತಟ್ಟುವಂತಿದೆ. ಲುಬ್ಲಿನ್ ಪೋಲರನ್ನು ಸಮ್ಮೇಳನಕ್ಕೆ ಕರೆಯಬೇಕೆಂದು ರಷ್ಯಾ ಒತ್ತಾಯ ಪಡಿಸುತ್ತಿರುವುದೂ, ಬ್ರಿಟಿಷ್ ಅಮೇರಿಕಾ ನಿರಾಕರಿಸುತ್ತಿರುವುದೂ ಅಂತಃಕಲಹಕ್ಕೆ ಕಾರಣವು.

ಚಿಮ್ಮೂರ್, ಅಸ್ಸಿ ಅಪರಾಧಿಗಳ ಮರಣದಂಡನೆ ಬಗ್ಗೆ ಗಾಂಧೀಜಿಯವರ ಚಿಂತೆ

ಚಿಮೂರ್ ಮತ್ತು ಅಸ್ಸಿ ಮೊಕದ್ದಮೆಯ ಅಪರಾಧಿಗಳ ಬಗ್ಗೆ ಮಹಾತ್ಮ ಗಾಂಧಿಯವರು ಗಾಢ ಯೋಚನಾಪರರಾಗಿರುವರು. ಬೊಂಬಾಯಿನ ಬಿಲರ್ಡ್ ಭವನದಲ್ಲಿ ನಡೆದ ಪ್ರತಿಯೊಂದು ಸಂಭಾಷಣೆಯು ಈ ಅಪರಾಧಿಗಳ ವಿಚಾರವಾಗಿಯೇ. ಸಾರ್ವಭೌಮರು ಈ ಖೈದಿಗಳ ಕ್ಷಮಾ ಅರ್ಜಿಯನ್ನು ನಿರಾಕರಿಸಿದ್ದರೂ, ಮತ್ತೊಂದಾವರ್ತಿ ಪ್ರಯತ್ನಿಸುವ ಸಲುವಾಗಿ ಸಾರ್ವಭೌಮರಿಗೆ ಕೇಬಲ್ ಕಳುಹಿಸಲ್ಪಟ್ಟಿತು. ಈ ಪ್ರಸಂಗದಲ್ಲಿ ಪತ್ರಿಕಾ ಸಂಪಾದಕರುಗಳು ಕೈಹಾಕಬೇಕೆಂದು ಗಾಂಧೀಜೀಯವರು ಹೇಳಿದ್ದಕ್ಕಾಗಿ, ದೇಶದ ನಾನಾ ಭಾಗಗಳ ಪತ್ರಿಕಾ ಸಂಪಾದಕರುಗಳು ರುಜು ಮಾಡಿದ ತಂತಿಯನ್ನು ಮುಖ್ಯ ಪಾಶ್ಚಾತ್ಯದ ಗೌರ್ನರರಿಗೂ, ಕೇಂದ್ರ ಸರ್ಕಾರದ ಹೋಂ-ಮೆಂಬರರಿಗೂ ಕಳುಹಿಸಿ ಖೈದಿಗಳ ವಿಷಯದಲ್ಲಿ ದಯತೋರಿಸ ಬೇಕೆಂದು ಕೇಳಿಕೊಂಡಿರುವರು.

ಲಕ್ಷ್ಮೀಕಾಂತಂ ಖೂನಿ ಮೊಕದ್ದಮೆ ಸೆಷನ್ಸ್ ವಿಚಾರಣೆ ಪ್ರಾರಂಭ

ಮದರಾಸು ಏ 2— ಲಕ್ಷ್ಮೀಕಾಂತಂ ಖೂನಿ ಮೊಕದ್ದಮೆ ಸೆಷನ್ಸ್ ವಿಚಾರಣೆಯು ನ್ಯಾಯಾಧೀಶರಾದ ಸರ್ ವೆರ್ ನೂಕೆಟ್‌ರವರ ಸಮ್ಮುಖದಲ್ಲಿ ಪ್ರಾರಂಭವಾಯಿತು. ಅಪರಾಧಿಗಳೆಲ್ಲರನ್ನೂ 10-45ರ ಹೊತ್ತಿಗೆ ತರಲಾಯಿತು. ಕ್ರೌನ್ ಗುಮಾಸ್ತೆಯರು ಅಪರಾಧಿಗಳ ಮೇಲಿನ ಆರೋಪಣೆಗಳನ್ನು ತಿಳಿಸಿದರು. ಅಪರಾಧಿಗಳೆಲ್ಲರೂ ತಾವು ತಪ್ಪಿತಸ್ಥರಲ್ಲವೆಂದರು. ಅಪರಾಧಿಗಳು ಬೆಂಚಿನ ಮೇಲೆ ಕುಳಿತುಕೊಳ್ಳಲು ಕೋರ್ಟಿನ ಅಪ್ಪಣೆ ದೊರೆಯಿತು. ಆಡ್ವೊಕೇಟ್ ಜನರಲ್ ಶ್ರೀ ರಾಜಮನ್ನಾರರು ಲಕ್ಷ್ಮೀಕಾಂತಂ ಖೂನಿ ವಿಷಯವನ್ನು ವಿವರಿಸಿದರು. 3 ಮಂದಿ ಯೂರೋಪಿಯನರೂ 6 ಮಂದಿ ಹಿಂದೂಗಳನ್ನೊಳಗೊಂಡ ಜೂರಿ ಏರ್ಪಡಿಸಲಾಗಿದೆ. ಪ್ರಾಸಿಕ್ಯೂಷನ್ ಪರ ಶ್ರೀ ಲಕ್ಷ್ಮಣಸ್ವಾಮಿ ಮತ್ತು ಲಕ್ಷ್ಮೀಕಾಂತಂರವರ ಲಾಯರ್ ನಗುವಣಂರ ಸಾಕ್ಷ್ಯವೂ ಪಾಟೀಸವಾಲೂ ನಡೆಯಿತು.

ಜರ್ಮನರು ಹಾಲೆಂಡ್ ತ್ಯಜಿಸಿದರು. ವಿಯನ್ನಾಕ್ಕೆ ರಷ್ಯನ್ನರು ಶೀಘ್ರಶೀಘ್ರವಾಗಿ ನುಗ್ಗುತ್ತಿದ್ದಾರೆ. ಜಪಾನಿಗೆ 350 ಮೈಲಿ ದೂರದಲ್ಲಿರುವ ಒಕಿನಾವ ದ್ವೀಪದಲ್ಲಿ ಅಮೇರಿಕ ಸೇನೆ ಒಂದಿಳಿದಿದೆ.

ವಾರ್ತಾತರಂಗ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನವನ್ನು ಮುಂದಕ್ಕೆ ಹಾಕುವ ಸಂಭವವಿದೆ.

ಆಸ್ಟ್ರೇಲಿಯಾದಲ್ಲಿ ಒಟ್ಟೇ ರೇಷನಿಂಗು ಜಾರಿಗೆ ಬಂದಿದೆ. 1800000000 ಕೂಪನ್‌ಗಳನ್ನು ಕೊಡಲಾಗಿದೆ.

ಹುಬ್ಬಳ್ಳಿಯಲ್ಲಿ ಮಕ್ಕಳನ್ನು ಪಾಠಶಾಲೆಗೆ ಕಳುಹಿಸಲಿಲ್ಲವೆಂದು 12 ಮಂದಿ ತಂದೆಯಂದಿರಿಗೆ ತಲಾ ರೂ. 1 ದಂತೆ ಜುಲ್ಮಾನೆಯಾಯಿತು. ಅವರಲ್ಲಿ ಬಬ್ಬನಿಗೆ 3 ವಾರ ಸಜಾ ಶಿಕ್ಷೆಯಾಯಿತು.

ಭಾರತದಲ್ಲಿ 10—12 ಲಕ್ಷ ಟನ್ ಸಕ್ಕರೆ ತಯಾರಾಗುತ್ತಿದ್ದರೂ ಎಷ್ಟೋ ಕಡೆ ಕಾಫಿಗೆ ಸರಿಯಾಗಿ ಸಕ್ಕರೆ ಇಲ್ಲವಲ್ಲಾ ಎಂದು ಗೊಣಗುಟ್ಟುತ್ತಿರುವರು

ಮದರಾಸಿನ ಆನಂದವಿಕಟನ್ ಪತ್ರಿಕೆ ಮಾಲೀಕರು ತಮ್ಮ ದೀಪಾವಳಿ ಸಂಚಿಕೆಗೆ ನ್ಯೂಸ್‌ಪ್ರಿಂಟ್ ಅಲ್ಲದ ಬೇರೆ ಕಾಗದವನ್ನು ಉಪಯೋಗಿಸಿದರೆಂದು ರೂ. 50 ಜುಲ್ಮಾನೆಯಾಯಿತು.

ಅಮೇರಿಕ 9 ನೇ ಸೇನೆಯು ಪ್ರತಿದಿವಸವೂ 294000 ಗ್ಯಾಲನ್ ಪೆಟ್ರೋಲನ್ನು ಉಪಯೋಗಿಸುವುದು.

ಯೂರೋಪಿನ ಪಶ್ಚಿಮ ರಣರಂಗದಲ್ಲಿ ಅಮೇರಿಕನ್ನರು ಫೆಬ್ರವರಿಯಲ್ಲಿ ಪ್ರತಿದಿವಸವೂ 55000 ಟನ್ ಆಹಾರ ಪದಾರ್ಥವನ್ನು ಪಯೋಗಿಸುತ್ತಿದ್ದರು.

ಹಿಟ್ಲರ್ ಯುವಕ ಸೇನೆಯಲ್ಲಿ 52 ವರ್ಷದ ತರುಣರಿರುವರಂತೆ !

ಲೆಂಡ್‌ಲೀಸ್ ಮೇರೆ ಅಮೇರಿಕಾದಿಂದ 30 ಸಾವಿರ ಕಟ್ಟಿದ ಬಂಗಲೆಗಳು ಬ್ರಿಟನ್ನಿಗೆ ಬಂದಿರುತ್ತವೆ. ಇದರಿಂದ ಬ್ರಿಟನ್ನಿನಲ್ಲಿ ಮನೆಗಳ ಅಭಾವ ಸ್ವಲ್ಪ ಕಮ್ಮಿಯಾಗುವುದು.

ಮುಂದೆ ಪ್ರಪಂಚದ ಅಂತರ್ರಾಷ್ಟ್ರೀಯ ನ್ಯಾಯನಿರ್ಣಯವನ್ನು ಸ್ಥಾಪಿಸುವ ವಿಷಯವು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಚರ್ಚೆಯಾಗುವುದು. ಇದಕ್ಕಾಗಿ ಬ್ರಿಟನ್, ರಷ್ಯಾ, ಚೈನಾಗಳ ನ್ಯಾಯಶಾಸ್ತ್ರಜ್ಞರು 9—4—45 ರಲ್ಲಿ ವಾಷಿಂಗ್ಟನ್ನಿನಲ್ಲಿ ಅಮೇರಿಕಾದ ನ್ಯಾಯಶಾಸ್ತ್ರಜ್ಞರ ಸಂಗಡ ಸೇರಿ ಚರ್ಚಿಸುವರು.

ಹೊಗೆಯಿಂದ ಭಂಗಾರ

ಧೂಮಪಾನ ಮಾಡುವುದರಿಂದ ನೇತ್ರ ದೃಷ್ಟಿ ನುಂದವಾಗುವುದೆಂದೂ, ವಾಗಿ ಅನೇಕ ರೋಗಗಳು ಉತ್ಪನ್ನವಾಗುವುದೆಂದೂ, ಬುದ್ಧಿಭ್ರಮಣೆಯಾಗುವುದೆಂದೂ, ಶ್ವಾಸಕೋಶಗಳು ಕೆಡುವುದೆಂದೂ, ದೇಹವೇ ಸುಡಲ್ಪಡುವುದೆಂದೂ ಇಂಗ್ಲೆಂಡಿನ ಜೇಮ್ಸ್ ರಾಜನ ಅಭಿಪ್ರಾಯವಾಗಿತ್ತು.

ರೋಮನಲ್ಲಿ ತಂಬಾಕನ್ನು ನಶ್ಯಕ್ಕಾಗಿ ಹೆಚ್ಚಾಗಿ ಉಪಯೋಗಿಸುವರು. ಚರ್ಚಿನಲ್ಲಿ ಯಾರಾದರೂ ತಂಬಾಕನ್ನು ತಂದರೆ ಅವರನ್ನು ಬಹಿಷ್ಕರಿಸುವುದಾಗಿ ಪೋಪರು ಹಿಂದೆ ಹೆದರಿಸಿದ್ದರು.

ಪರ್ಷಿಯಾದಲ್ಲಿ ಯಾವ ಅಂಗಡಿಯವನು ತಂಬಾಕನ್ನು ಮಾರುವನೋ ಅವನ ಜಾಯಿಗೆ ಸೀಸಾ ಕಾಯಿಸಿ ಹಾಕುತ್ತಿದ್ದರು.

ತುರ್ಕಿಯಲ್ಲಿ ಯಾರು ತಂಬಾಕು ಸೇವಿಸುತ್ತಿದ್ದರೋ ಅಂಥವರನ್ನು ಅವರ ಗುಡಿಗುಡಿಯನ್ನು ಮೂಗಿಗೆ ತುರುಕಿಗಲ್ಲಿಗೇರಿಸುತ್ತಿದ್ದರು.

ಸ್ಪೇನಿನಲ್ಲಿ ನಾವಿಕರು ಹೊಗೆಬತ್ತಿ ಸೇದುತ್ತಾ ಬಾಯಲ್ಲೂ ಮೂಗಿನಲ್ಲೂ ಹೊಗೆ ಬಿಡುತ್ತಿದ್ದರೆ, ಅವರ ದೇಹದಲ್ಲಿ ದೆವ್ವ ಸೇರಿಕೊಂಡಿದೆಯೆಂದು ಅವರನ್ನು ಬಂದೀಖಾನೆಗೆ ಹಾಕುತ್ತಿದ್ದರು.

ಇಂಗ್ಲೆಂಡಿನಲ್ಲಿ ಸರ್ ವಾಲ್ಟರ್ ರ್ಯಾಲೆ ಕಾಲದಲ್ಲಿ ಹೊಗೆ ಬತ್ತಿ ಸೇದುವ ಅಭ್ಯಾಸ ಬಂತು. ಒಂದು ದಿವಸ ರ್ಯಾಲೆಯು ರಾಣಿಯ ಬಳಿಗೆ ಹೋಗಿ ತಾನು ಹೊಗೆಯ ತೂಕ ಎಷ್ಟೆಂದು ಹೇಳಬಲೆ ನೆಂದನು. ಹೊಗೆಯ ತೂಕ ಏಷ್ಟೆಂದು ಹೇಳಿದರೆ, ಅದರ ತೂಕ ಭಂಗಾರ ಕೊಡುವುದಾಗಿ ರಾಣಿಯು ಹೇಳಿದಳು. ರ್ಯಾಲೆಯು ಒಂದು ಕಟ್ಟು ಚುಟ್ಟು ಸೇದಿ ಬೂದಿಯನ್ನು ತೂಕಮಾಡಿ ಅದೆ ತೂಕವು ಹೊಗೆಯ ತೂಕವೆಂದನು ರಾಣಿಯು ಬಹುಮಾನ ಮಾಡಿ ಎಲ್ಲರೂ ಭಂಗಾರನನ್ನು ಹೊಗೆ ಮಾಡುವರು. ನೀನು ಹೊಗೆಯನ್ನು ಭಂಗಾರ ಮಾಡಿದೆ ಎಂದಳು.

ಶ್ರೇಷ್ಠ ತರಹದ ವಾಸಸ್ಥಾನ

ದ. ಆಫ್ರಿಕಾದಲ್ಲಿ ಗಾಜಿನ ಇಟ್ಟಿಗೆಗಳನ್ನು ತಯಾರ್ಮಾಡಿ ಅದಂದ ಮನೆಗಳನ್ನು ತಯಾರ್ಮಾಡುತ್ತಿರುವರು. ಈ ಮನೆಗಳಲ್ಲಿ ವಾಸಮಾಡಿದರೆ ಬೇಸಿಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಬೆಚ್ಚಗೂ ಇರಲು ಅನುಕೂಲವಾಗಿದೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit ❁ Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ನೋತಿಲಾಲ್ ಶೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್ 3 ನೇ ವಾರ

ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

For Good Printing—

L. N. Press

Srirampet MYSORE

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahaadev

Opera Talkies, Mysore

ಆಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ ಮೈಸೂರು

Good Coffee

Sastry's Coffee Rooms

Chamarajapuram, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಆರ್. ಎ. ಎಫ್. ಟೈಪ್ ವಿಮಾನ ಚಲಾಯಿಸುವವರು ವಿಮಾನ ಹತ್ತಿ ಕಾರ್ಯಸಾಧನೆ ಮಾಡುವುದಕ್ಕೆ ಹೊರಡುತ್ತಿರುವರು.